ರಾಜ್ಯಸರ್ಕಾರದ ಸಚಿವಾಲಯದಲ್ಲಿ ಬಾಕಿ ಇರತಕ್ಕ ಕಡತಗಳು

1908 (2167) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ವಿವಿಧ ಇಲಾಖೆಗಳಲ್ಲಿ ಆರು ತಿಂಗಳಿಗಿಂತ ಹೆಚ್ಚಾಗಿ ವಿಲೇವಾರಿಯಾಗದ ಕಡತಗಳ ಸಂಖ್ಯೆ ಎಷ್ಟು; ವಿಳಂಬಕ್ಕೆ ಕಾರಣಗಳೇನು?

ಆ. ಕಡತ ವಿಳಂಬಕ್ಕೆ ಸಂಬಂಧಪಟ್ಟ ನೌಕರ: ಅಧಿಕಾರಿಯನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆಯೇ?

ಇ. ಬಾಕಿ ಉಳಿದಿರುವ ಎಲ್ಲಾ ಕಡತಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. 85,550

ಬಹುತೇಕ ಪ್ರಕರಣಗಳು ನ್ಯಾಯಾಲಯದಲ್ಲಿ, ಕೇಂದ್ರ ಸರ್ಕಾರದಲ್ಲಿ ಹಾಗೂ ಇಲಾಖಾ ಮುಖ್ಯಸ್ಥರುಗಳಲ್ಲಿ ಬಾಕಿ ಉಳಿದಿರುತ್ತವೆ.

ಆ. "ಅ" ನಲ್ಲಿ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. 1. ಶೀಘ್ರ ವಿಲೇವಾರಿಗೆ ಕ್ಷೇತ್ರ ಇಲಾಖೆಗಳಿಂದ ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಕ್ಷೇತ್ರ ಇಲಾಖೆ ಮತ್ತು ಸಚಿವಾಲಯದ ನಡುವೆ ಏಕ ಕಡತ ಪದ್ಧತಿ ಜಾರಿಗೊಳಿಸಲಾಗಿದೆ.

2. ಸಚಿವಾಲಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲು ವಿವಿಧ ಮಟ್ಟಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಪೀಠಾಧಿಕಾರಿ ಪದ್ಧತಿ: ಹಂತಜಿಗಿಯುವಿಕೆ ಪದ್ದತಿಯನ್ನು ಜಾರಿಗೊಳಸಲಾಗಿದೆ.

3. ಸಚಿವಾಲಯದಲ್ಲಿ ಬಾಕಿ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡಲು ಕಡತ ವಿಲೇವಾರಿ ಮಾಸಿಕವನ್ನು ದಿನಾಂಕ: 16.1.2003 ರಿಂದ 15.2.2003ರವರೆಗೆ ಆಚರಿಸಲಾಗಿದೆ.

4. ಏಪ್ರಿಲ್ ಹದಿನೈದರೊಳಗಾಗಿ ಸಚಿವಾಲಯದಲ್ಲಿ ಒಂದು ವರ್ಷಕ್ಕೂ ಮೇಲ್ಪಟ್ಟು, ಬಾಕಿ ಉಳಿದಿರುವ ಕಡತಗಳ ಶೇಕಡ 50 ರಷ್ಟನ್ನು ವಿಲೇವಾರಿ ಮಾಡಲು ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ: ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

5. ಸಚಿವಾಲಯದ ಕಡತ ವಿಲೇವಾರಿಯ ಪ್ರತಿ ತಿಂಗಳ ಅಂಕಿ ಅಂಶಗಳನ್ನು ಸಚಿವ ಸಂಪುಟವು ಸಮೀಕ್ಷೆ ನಡೆಸುತ್ತಿದೆ.

6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ : ಕಾರ್ಯದರ್ಶಿಗಳ ಸಭೆಯಲ್ಲೂ ಸಹ ಕಡತ ವಿಲೇವಾರಿ ವರದಿಗಳನ್ನು ಸಮೀಕ್ಷೆ ಮಾಡಲಾಗುತ್ತಿದೆ.

ಬೈಲಹೊಂಗಲದಲ್ಲಿರುವ ಕಾರಗೃಹದ ನವೀಕರಣ

1910(1721) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿರುವ ಕಾರಾಗೃಹಗಳ ವಸತಿಗೃಹಗಳ ಸುತ್ತಲೂ ಕಾಂಪೌಂಡ್ ಗೋಡೆ ಇಲ್ಲದೇ ಇರುವ ಸಂಗತಿ ನಿಜವೇ?

ಅ. ಹಾಗಿದ್ದಲ್ಲಿ, ಈ ಕಾರಾಗೃಹದ ವಸತಿ ಗೃಹದ ಸುತ್ತಲೂ ಕಾಂಪೌಂಡ್ ಗೋಡೆಯನ್ನು ಕಟ್ಟಿ ನವೀಕರಣ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಇ. ಈ ಕಾರಾಗೃಹದ ಸುತ್ತಲೂ "ಆಶ್ರಯ" ಮನೆಗಳು ಬರುತ್ತಿರುವುದರಿಂದ ಅತಿಕ್ರಮಣ ತಪ್ಪಿಸಲು ಕಾಂಪೌಂಡ್‌ಗೋಡೆಯನ್ನು ಕಟ್ಟಿ ಹಾಗೂ ಬೆಲೆ ಬಾಳುವ ಆಸ್ತಿಯನ್ನು ಉಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಜ ಅಮರೇಶ್ವರ ನಾಯಕ (ಬಂದೀಖಾನೆ ಸಚಿವರು)

ಅ. ಹೌದು

ಆ. ಅನುದಾನದ ಲಭ್ಯತೆಯನ್ನಾಧರಿಸಿ ಸದರಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ 2002-07ರ 5 ವರ್ಷಗಳ ಹೊಂದಾಣಿಕೆ ಮೊತ್ತದ ಪರ್‌ಸ್ಪೆಕ್ಟೀವ್ ಯೋಜನೆಯಡಿ ರೂ. 50,000.00 ಗಳ ಲೋಕೋಪಯೋಗಿ ಇಲಾಖೆಯ ಅಂದಾಜಿನ ವೆಚ್ಚದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಇ. ಜೈಲು ಜಮೀನಿನಲ್ಲಿ ಯಾವುದೇ ಅತಿಕ್ರಮಣ ವಾಗಿರುವುದಿಲ್ಲ. ಜೈಲಿನ ಬೆಲೆಬಾಳುವ ಆಸ್ತಿಯ ರಕ್ಷಣೆಗೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಕಾಂಪೌಂಡ್‌ಗೋಡೆ ನಿರ್ಮಾಣದ ವಿಷಯದಲ್ಲಿ ಅಧೀಕ್ಷಕರು ಹಾಗೂ ಲೋಕೋಪಯೋಗಿ ಇಲಾಖೆಯವರೊಂದಿಗೆ ಪತ್ರವ್ಯವಹಾರ ಮುಂದುವರೆದಿದೆ. ಪರಿಷ್ಕೃತ ಅಂದಾಜು ಪಟ್ಟಿಯನ್ನು ಪಡೆದು ಮುಂಬರುವ ಆರ್ಥಿಕ ವರ್ಷದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ರಾಜ್ಯ ಸರ್ಕಾರದವರು ನಡೆಸುತ್ತಿರುವ ಲಾಟರಿ ಯೋಜನೆ

1911 (1722) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2000-2001, 2001- 2002, 2002-2003ನೇ ಸಾಲಿನಲ್ಲಿ ರಾಜ್ಯ ಸರ್ಕಾರದವರು ನಡೆಸುತ್ತಿರುವ ಲಾಟರಿ ಯೋಜನೆಯಿಂದ ಎಷ್ಟು ಆದಾಯ ಬರುವುದೆಂದು ನಿರೀಕ್ಷಣೆ ಮಾಡಲಾಗಿತ್ತು? ಎಷ್ಟು ಹಣ ಸಂಗ್ರಹವಾಗಿದೆ? ಎಷ್ಟು ಹಣ ಸರ್ಕಾರಕ್ಕೆ ಲಾಭವಾಗಿದೆ?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ. ಸಾಂಪ್ರದಾಯಿಕ ಲಾಟರಿ ಮತ್ತು ಗಣಕೀಕೃತ ನೆಟ್‌ವರ್ಕ್ ಲಾಟರಿ ಆದಾಯದ ವಿವರಗಳು ಈ ಕೆಳಕಂಡಂತಿದೆ:

1. ಸಾಂಪ್ರಾದಾಯಿಕ ಲಾಟರಿ:

(ರೂ. ಕೋಟಿಗಳಲ್ಲಿ)

ವರ್ಷ	ನಿರೀಕ್ಷಿತ ಲಾಭ	ವಾಸ್ತವಿಕ ಲಾಭ	ನಿವ್ವಳ ಲಾಭ
2000-01	14	11.2	9.5
2001-02	14	12.44	12.44
2002-03	15.21	*-	*-

*(ವರ್ಷದ ಅಂತ್ಯದಲ್ಲಿ ವಿವರಗಳು ಲಭ್ಯವಾಗುತ್ತದೆ)